**BRUHAT BANGALORE MAHANAGARA PALIKE**

No: DCF/PR-1508/2020-21

Office of the
Deputy Conservator of Forests
Bruhat Bangalore Mahanagara Palike
N.R. Square Annex Biliding-3
Bengaluru, dated: 16.01.2021

To
The I.T Adviser
BBMP
Bengaluru.

Sir,

Sub: Uploading the documents of Official Memorandum issued with regard Construction of Grade-Separator and Road Widening at Shivananda Circle to Sheshadripuram BBMP-reg
Ref: As per the orders of Hon'ble High Court of Karnataka in WP:17341/2018

******

Documents pertaining to the Official Memorandum issued with regard to Construction of Grade-Separator and Road Widening at Shivananda Circle to Sheshadripuarm are enclosed here with a request to uploaded to the same in the website of BBMP.

Yours faithfully
Sd/-
Tree Officer and
Deputy Conservator of Forests,
Bruhat Bangalore Mahangara Palike.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಉಅಸಂ/ಪಿಆರ್/1489 /2020-21

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಎನ್.ಆರ್.ಸ್ಕ್ವೇರ್, ಅನೆಕ್ಸ್ ಬಿಲ್ಡಿಂಗ್-3
ಬೆಂಗಳೂರು, ದಿನಾಂಕ:15.01.2021.

## ಕಛೇರಿ ಅಧಿಕೃತ ಜ್ಞಾಪನಾ ಪತ್ರ

ವಿಷಯ: ಬಿಬಿಎಂಪಿ ಪೂರ್ವ ವಲಯದ ವ್ಯಾಪ್ತಿಯ ಶಿವಾನಂದ ವೃತ್ತದಲ್ಲಿ ಅನುಷ್ಠಾನಗೊಳಿಸುತ್ತಿರುವ 1 ಮತ್ತು 2ನೇ ಹಂತದ ಕಬ್ಬಿಣದ ಮೇಲು ಸೇತುವೆ ನಿರ್ಮಾಣ ಕಾಮಗಾರಿಗೆ ಅಡ್ಡಬರುವ ಮರಗಳ ಉಳಿಸುವಿಕೆ/ಮರುನಾಟಿ/ತೆರವುಗೊಳಿಸುವ ಬಗ್ಗೆ

ಉಲ್ಲೇಖ:
1. ಕಾರ್ಯಪಾಲಕ ಅಭಿಯಂತರರು ಇವರು ಕಡತದಲ್ಲಿ ಟಿಪ್ಪಣಿ ಮೂಲಕ ದಿನಾಂಕ 25.7.2019 ರಂದು ಮಾಡಿಕೊಂಡ ಮನವಿ
2. ಕಾರ್ಯಪಾಲಕ ಅಭಿಯಂತರರು ಇವರ ಪತ್ರ ಸಂ: ಕಾ.ಪಾ.ಅ/(ಯೋ.ಕೇ-9) ಪಿಆರ್-19 /20-21 ದಿ: 2.9.2020

*******

**ಪ್ರಸ್ತಾವನೆ:**

ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರ-9) ಪೂರ್ವ ವಲಯ ಇವರು ಉಲ್ಲೇಖದಡಿಯಲ್ಲಿನ ಪತ್ರಗಳಲ್ಲಿ ಶಿವಾನಂದ ವೃತ್ತದಲ್ಲಿ ನಿರ್ಮಾಣವಾಗುತ್ತಿರುವ ಗ್ರೇಡ್ ಸಪರೇಟರ್/ಮೇಲು ಸೇತುವೆ ಕಾಮಗಾರಿಗೆ 1 ನೇ ಹಂತದಲ್ಲಿ 18 ಮರಗಳು ಹಾಗೂ 2ನೇ ಹಂತದಲ್ಲಿ 16ಮರಗಳ ತೆರವಿಗೆ ಬೇರೆ ಬೇರೆ ದಿನಾಂಕಗಳಲ್ಲಿ (ಉಲ್ಲೇಖ -1 ಮತ್ತು 2ರಂತೆ) ಅರ್ಜಿ ಸಲ್ಲಿಸಿ ಅನುಮತಿ ಕೋರಿರುತ್ತಾರೆ. ಅದರಂತೆ ಸ್ಥಳ ಪರಿಶಿಲಿಸಿ ನೋಡಲಾಗಿ ಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ಮಿಸಲಾಗುತ್ತಿರುವ ಮೇಲು ಸೇತುವೆ ಕಾಮಗಾರಿಗೆ ಪ್ರಥಮ ಹಂತದಲ್ಲಿ 18 ಮರಗಳು ಹಾಗೂ 2ನೇ ಹಂತದಲ್ಲಿ 16 ವಿವಿಧ ಜಾತಿಯ ಮರಗಳು ಅಡ್ಡಬರುತ್ತಿರುವುದು ಪರಿಶಿಲನೆಯಿಂದ ದೃಢಪಟ್ಟಿರುತ್ತದೆ. ಅದರಂತೆ ಮರಗಳ ಎಣಿಕೆ ಪಟ್ಟಿ ತಯಾರಿಸಿದ್ದು, ಸದರೀ ಪ್ರಸ್ತಾವನೆಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲದ ನಿರ್ದೇಶನದ ಪ್ರಕಾರ ವೃಕ್ಷ ತಜ್ಞರ ಸಮಿತಿಯ ಮುಂದೆ ಮಂಡಿಸಿ ಅವರಿಂದ ಸ್ಥಳ ಪರಿಶೀಲನಾ ವರದಿ ನಂತರ ಸಮಿತಿಯು ನೀಡುವ ಮಾರ್ಗದರ್ಶನದಂತೆ ವೃಕ್ಷಾಧಿಕಾರಿಯವರು ಕ್ರಮ ವಹಿಸಬೇಕಾಗಿರುತ್ತದೆ. ಅದರಂತೆ ಎರಡೂ ಹಂತಗಳಲ್ಲಿರುವ ಮರಗಳ ತೆರವಿನ ಬಗ್ಗೆ ಸಮಿತಿಯ ಮುಂದೆ ಮಂಡಿಸಲಾಯಿತು. ಆದ್ದರಿಂದ ಸಮಿತಿಯು ನಡಾವಳಿಗಳು ಕ್ರಮವಾಗಿ 1ನೇ ಹಂತ 17.02.2020 ಮತ್ತು 2ನೇ ಹಂತ 22.10.2020 ರಲ್ಲಿ ನೀಡಿರುವ ಮಾರ್ಗದರ್ಶನದಂತೆ ಹಾಗೂ ವೃಕ್ಷ ತಜ್ಞರ ಸಮಿತಿಯ ಸ್ಥಳ ಪರಿಶೀಲನೆಯಲ್ಲಿ ನೀಡಿರುವ ವರದಿಯಂತೆ ಕ್ರಮವಹಿಸಲು ತೀರ್ಮಾನಿಸಿದೆ.

## ಆದೇಶ:

ಮೇಲೆ ವಿವರಿಸಿರುವ ಕಾರಣಗಳು ಹಾಗೂ ವೃಕ್ಷಾಧಿಕಾರಿಯವರಿಗೆ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ, 1976ರ ಕಲಂ (8) 3 ರಡಿ ಪ್ರದತ್ತವಾದ ಅಧಿಕಾರ ಹಿನ್ನಲೆಯಲ್ಲಿ ಶಿವಾನಂದ ವೃತ್ತದಲ್ಲಿ ನಿರ್ಮಾಣವಾಗುತ್ತಿರುವ ಗ್ರೇಡ್‌ಸಪರೇಟರ್/ಮೇಲು ಸೇತುವೆ ಕಾಮಗಾರಿಗೆ 34 ವೈಕಿ ಮರಗಳು, ಮರುನಾಟಿ ಮಾಡುವ ಮರಗಳ ಸಂಖ್ಯೆ 12, ಕತ್ತರಿಸಿ ಮಾಡಬೇಕಾದ ಮರಗಳ ಸಂಖ್ಯೆ 22 ಮರಗಳ ಕತ್ತರಿಸಿ/ಮರುನಾಟಿ ಆದೇಶ ನೀಡಲು ವೃಕ್ಷ ತಜ್ಞರ ಸಮಿತಿಯ ಸ್ಥಳಪರಿಶೀಲನಾವರದಿಯಲ್ಲಿ ನೀಡಿರುವ ಕಾರಣದಂತೆ, ಮರಗಳಲ್ಲಿ ಮರುನಾಟಿ ಮತ್ತು ಕತ್ತರಿಸಿ ಮಾಡಬೇಕಾದ ಮರಗಳ ಸಂಖ್ಯೆ, ಜಾತಿ ಇತ್ಯಾದಿ ವಿವರ ಮತ್ತು ಷರತ್ತುಗಳೊಂದಿಗೆ, ಮರುನಾಟಿ ಮತ್ತು ಕತ್ತರಿಸಿ ಆದೇಶ ನೀಡಲಾಗಿದೆ. ವಿವರಗಳನ್ನು ಅನುಬಂಧ-1, ಅನುಬಂಧ-2 ರಲ್ಲಿ ನೀಡಲಾಗಿದೆ.

### ಘೋಷ್ವಾರೆ:

| | | |
|---|---|---|
| | **ಒಟ್ಟು ಮರಗಳ ಸಂಖ್ಯೆ:** | **-34** |
| 1. | ಮರುನಾಟಿ ಮಾಡಬೇಕಾದ ಮರಗಳ ಸಂಖ್ಯೆ: | -12 |
| 2. | ಕತ್ತರಿಸಿಮಾಡಬೇಕಾದ ಮರಗಳ ಸಂಖ್ಯೆ: | -22 |

### ಷರತ್ತುಗಳು:

- ಮರುನಾಟಿ ಕಾರ್ಯವನ್ನು ಅರಣ್ಯ ಸಿಬ್ಬಂದಿಗಳ ಸೂಕ್ತ ತಾಂತ್ರಿಕ ಮೇಲ್ವಿಚಾರಣೆಯಲ್ಲಿ ಅವರ ಸಲಹೆ ಸೂಚನೆಯಂತೆ ಕೈಗೊಳ್ಳತಕ್ಕದ್ದು.
- ಮರುನಾಟಿ ಮಾಡಬೇಕಾದ ಮರಗಳನ್ನು ವ್ಯಕ್ತಿ/ಸಂಸ್ಥೆಯ ಸಹಾಯದಿಂದ ಸ್ಥಳಾಂತರಿಸಿ ಅದನ್ನು ಸೂಕ್ತವಾದ ಸ್ಥಳವನ್ನು ಅರಿಸಿದ ನಂತರ, ಅರಣ್ಯಾಧಿಕಾರಿಗಳೊಂದಿಗೆ ಪರಿಶೀಲಿಸಿದ ನಂತರ ಮರುನಾಟಿಮಾಡುವುದು. ಮರುನಾಟಿಮಾಡಿ ಕನಿಷ್ಠ 3 ವರ್ಷಗಳ ಅವಧಿಯವರೆಗೆ ನಿರ್ವಹಣೆಮಾಡಬೇಕು.
- ಮರುನಾಟಿ ಕಾರ್ಯವನ್ನು ಕೈಗೊಳ್ಳುವ ವ್ಯಕ್ತಿ/ಸಂಸ್ಥೆಯು ಮರುನಾಟಿಮಾಡಲು ಅರ್ಹತೆ ಹೊಂದಿರತಕ್ಕದ್ದು ಹಾಗೂ ಅವರುಗಳ ಹೆಸರು ವಿಳಾಸ ಮತ್ತು ಮರುನಾಟಿಮಾಡಿದ ಮರದ ಸಂಖ್ಯೆಯೊಂದಿಗೆ ಮರದ ಛಾಯಾಚಿತ್ರಗಳನ್ನು ಇತ್ಯಾದಿಗಳನ್ನು ದಾಖಲೆ ರೂಪದಲ್ಲಿ ಸಂಗ್ರಹಿಸಿಡಬೇಕು.
- ಆದೇಶದಲ್ಲಿ ತಿಳಿಸಿರುವಂತೆ ಕತ್ತರಿಸಿಮಾಡುವ ಪ್ರತೀ ಮರಗಳ ಬದಲಿಗೆ ನೆಡುತ್ತಿರುವ (3) ಸಸಿಗಳ ವಿವರಗಳನ್ನು ಛಾಯಾಚಿತ್ರದೊಂದಿಗೆ ಕಛೇರಿಗೆ ಸಲ್ಲಿಸುವುದು.
- ತೆರವುಗೊಳಿಸಲಾದ ಪ್ರತೀ ಮರದ ಬದಲಿಗೆ ಎತ್ತರದ ಹಾಗೂ ಉತ್ತಮ ಜಾತಿಯ ಕನಿಷ್ಠ 3 ಸಸಿಗಳನ್ನು ಸೂಕ್ತ ಸ್ಥಳದಲ್ಲಿ ನೆಟ್ಟು 3 ವರ್ಷಗಳವರೆಗೆ ನಿರ್ವಹಿಸಬೇಕು

ವೃಕ್ಷಾಧಿಕಾರಿಗಳು ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪ್ರತಿಯನ್ನು:-

1. ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರ-9), ಬಿಬಿಎಂಪಿ ಪೂರ್ವ ವಲಯ ಇವರಿಗೆ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
2. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಬಿಎಂಪಿ ಇವರ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
3. ವಲಯ/ಉಪ ವಲಯ ಅರಣ್ಯಾಧಿಕಾರಿ ಪೂರ್ವ ವಲಯ ಇವರ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

# ಅನುಬಂಧ-1

## 1 ನೇ ಹಂತದಲ್ಲಿ ಮರುನಾಟಿ ಮತ್ತು ಕತ್ತಾವಣೆ ಮಾಡಬೇಕಾದ ಮರಗಳ ವಿವರ

| ಕ್ರಮ.ಸಂ | ಮರದ ಸಂಖ್ಯೆ | ಮರದ ಜಾತಿ | ತೆಗೆದುಕೊಳ್ಳಬೇಕಾದ ಕ್ರಮ |
|---|---|---|---|
| 01 | 1 | ಮಹಾಗನಿ | ಮರುನಾಟಿ |
| 02 | 3 | ಮಹಾಗನಿ | ಮರುನಾಟಿ |
| 03 | 5 | ಮಹಾಗನಿ | ಮರುನಾಟಿ |
| 04 | 7 | ಮಹಾಗನಿ | ಮರುನಾಟಿ |
| 05 | 10 | ಮಹಾಗನಿ | ಮರುನಾಟಿ |
| 06 | 13 | ಮಹಾಗನಿ | ಮರುನಾಟಿ |
| 07 | 15 | ಅತ್ತಿ | ಮರುನಾಟಿ |
| 08 | 17 | ಹಲಸು | ಮರುನಾಟಿ |
| 09 | 18 | ಹಲಸು | ಮರುನಾಟಿ |

## 2 ನೇ ಹಂತದಲ್ಲಿ ಮರುನಾಟಿ ಮಾಡಬೇಕಾದ ಮರಗಳ ವಿವರ

| ಕ್ರಮ.ಸಂ | ಮರದ ಸಂಖ್ಯೆ | ಮರದ ಜಾತಿ | ತೆಗೆದುಕೊಳ್ಳಬೇಕಾದ ಕ್ರಮ |
|---|---|---|---|
| 01 | 3 | ಮಹಾಗನಿ | ಮರುನಾಟಿ |
| 02 | 4 | ಮಹಾಗನಿ | ಮರುನಾಟಿ |
| 03 | 6 | ಮಹಾಗನಿ | ಮರುನಾಟಿ |

16/1/21.

ವೃಕ್ಷಾಧಿಕಾರಿಗಳು ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

# ಅನುಬಂಧ-2

## 1 ನೇ ಹಂತದಲ್ಲಿ ಕತ್ತಾವಣೆ ಮಾಡಬೇಕಾದ ಮರಗಳ ವಿವರ

| ಕ್ರಮ.ಸಂ | ಮರದ ಸಂಖ್ಯೆ | ಮರದ ಜಾತಿ | ತೆಗೆದುಕೊಳ್ಳಬೇಕಾದ ಕ್ರಮ |
|---|---|---|---|
| 01 | 02 | ಹೂವರ್ಸಿ | ತೆರವುಗೊಳಿಸುವುದು |
| 02 | 04 | ಹೂವರ್ಸಿ | ತೆರವುಗೊಳಿಸುವುದು |
| 03 | 06 | ಹೂವರ್ಸಿ | ತೆರವುಗೊಳಿಸುವುದು |
| 04 | 09 | ಹೂವರ್ಸಿ | ತೆರವುಗೊಳಿಸುವುದು |
| 05 | 12 | ಹೂವರ್ಸಿ | ತೆರವುಗೊಳಿಸುವುದು |
| 06 | 14 | ಹೂವರ್ಸಿ | ತೆರವುಗೊಳಿಸುವುದು |
| 07 | 11 | ಕೋಕನಟ್ | ತೆರವುಗೊಳಿಸುವುದು |
| 08 | 16 | ಅರಳಿ | ತೆರವುಗೊಳಿಸುವುದು |
| 09 | 08 | ಮಹಾಗನಿ | ತೆರವುಗೊಳಿಸುವುದು |

## 2 ನೇ ಹಂತದಲ್ಲಿ ಕತ್ತಾವಣೆ ಮಾಡಬೇಕಾದ ಮರಗಳ ವಿವರ

| ಕ್ರಮ.ಸಂ | ಮರದ ಸಂಖ್ಯೆ | ಮರದ ಜಾತಿ | ತೆಗೆದುಕೊಳ್ಳಬೇಕಾದ ಕ್ರಮ |
|---|---|---|---|
| 01 | 1 | ಗುಲ್ ಮೊಹರ್ | ತೆರವುಗೊಳಿಸುವುದು |
| 02 | 2 | ಪಾರ್ಕಿಯ | ತೆರವುಗೊಳಿಸುವುದು |
| 03 | 5 | ಪಾರ್ಕಿಯ | ತೆರವುಗೊಳಿಸುವುದು |
| 04 | 7 | ಫೆಲ್ಟೋಫಾರಂ | ತೆರವುಗೊಳಿಸುವುದು |
| 05 | 8 | ಗುಲ್ ಮೊಹರ್ | ತೆರವುಗೊಳಿಸುವುದು |
| 06 | 9 | ಪಾರ್ಕೀಯ | ತೆರವುಗೊಳಿಸುವುದು |
| 07 | 10 | ಪಾರ್ಕಿಯ | ತೆರವುಗೊಳಿಸುವುದು |
| 08 | 11 | ಫೆಲ್ಟೋಫಾರಂ | ತೆರವುಗೊಳಿಸುವುದು |
| 09 | 12 | ಗುಲ್ ಮೊಹರ್ | ತೆರವುಗೊಳಿಸುವುದು |
| 10 | 13 | ಪಾರ್ಕಿಯ | ತೆರವುಗೊಳಿಸುವುದು |
| 11 | 14 | ಪಾರ್ಕಿಯ | ತೆರವುಗೊಳಿಸುವುದು |
| 12 | 15 | ಪಾರ್ಕಿಯ | ತೆರವುಗೊಳಿಸುವುದು |
| 13 | 16 | ಪಾರ್ಕಿಯ | ತೆರವುಗೊಳಿಸುವುದು |

10/1/21.

ವೃಕ್ಷಾಧಿಕಾರಿಗಳು ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು